**ಸಿ.ಸಿ.ನಂ.562/2023**
**ಪಿ.ಡಬ್ಲ್ಯೂ.1**

**ಸಾಕ್ಷಿಗೆ ದಿನಾಂಕ : 03-07-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**
**ಮುಂದುವರೆದ ಪಾಟೀ ಸವಾಲು : ಶ್ರೀ.ಎಸ್.ಎಫ್.ಬಿ ವಕೀಲರಿಂದ ಆರೋಪಿ ಪರವಾಗಿ**

1. ನೀವು ಆರೋಪಿತನನ್ನು ಹೊರತುಪಡಿಸಿ ಬೇರೆ ಯಾರ ವಿರುದ್ಧ ಚೆಕ ಬೌನ್ಸ ಪ್ರಕರಣ ಸಲ್ಲಿಸಿದ್ದೀರಿ ಎಂದರೆ ಸಾಕ್ಷಿಯು ಬೆಳಗಲಿ ಗ್ರಾಮದ ವ್ಯಕ್ತಿಯ ವಿರುದ್ಧ ಸಲ್ಲಿಸಿದ್ದು ಅದು ರಾಜೀ ಆಗಿದೆ ಎಂದು ಹೇಳುತ್ತಾರೆ. ಯಾವ ವರ್ಷದಲ್ಲಿ ಸದರಿ ಪ್ರಕರಣ ಸಲ್ಲಿಸಿದ್ದೀರಿ ಎಂದರೆ ನೆನಪಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಸಿ.ಸಿ.ನಂ.419/2018 ರಂತೆ ನೀವು ಶ್ರೀಶೈಲ ಹೊಸಮನಿ ವಿರುದ್ಧ ಒಂದು ಪ್ರಕರಣ ಸಲ್ಲಿಸಿದ್ದೀರಿ ಎಂದರೆ ಸರಿ. ಸದರಿ ಪ್ರಕರಣ ಖೊಟ್ಟಿ ಪ್ರಕರಣ ಇದ್ದು, 1 ಲಕ್ಷ 64 ಸಾವಿರ 500 ರೂಪಾಯಿ ಪಡೆದು ರಾಜೀ ಮಾಡಿಕೊಂಡಿದ್ದೀರಾ ಎಂದರೆ ಸಾಕ್ಷಿಯು ಸುಳ್ಳು ಪ್ರಕರಣ ಸಲ್ಲಿಸಿಲ್ಲ, 5 ಲಕ್ಷ 50 ಸಾವಿರಗಳಿಗೆ ರಾಜೀ ಮಾಡಿಕೊಂಡಿದ್ದೇನೆ ಎಂದು ಹೇಳುತ್ತಾರೆ. ನೀವು 1 ಲಕ್ಷ 64 ಸಾವಿರದ 500 ರೂಪಾಯಿಗಳನು ಪಡೆದು ದಿ:27.03.2021 ರಂದು ಸದರಿ ಪ್ರಕರಣ ಲೋಕ ಅದಾಲತನಲ್ಲಿ ಬಗೆಹರಿಸಿಕೊಂಡಿದ್ದೀರಿ ಎಂದರೆ ಎಷ್ಟು ಮೊತ್ತ ಬರೆದಿದ್ದಾರೋ ನನಗೆ ಗೊತ್ತಿಲ್ಲ, ಆದರೆ ನನಗೆ ಬಂದಿದ್ದು 5 ಲಕ್ಷ 50 ಸಾವಿರ ಎಂದು ಸಾಕ್ಷಿ ಹೇಳುತ್ತಾರೆ. ವಿಠ್ಠಲ ಬಡಿಗೇರ ಅವರ ಮೇಲೆ 28/2018 ರಂತೆ ಚೆಕ ಬೌನ್ಸ ಪ್ರಕರಣ ಸಲ್ಲಿಸಿದ್ದೀರಿ ಎಂದರೆ ಸರಿ. ಸದರಿ ಪ್ರಕರಣ 3 ಲಕ್ಷ ರೂಪಾಯಿಗೆ ಸಲ್ಲಿಸಿದ್ದು, ಅದರಲ್ಲಿ ರಾಜೀ ಆದಿರಿ ಎಂದರೆ ಸರಿ. ಸಿ.ಸಿ.ನಂ.9/2018 ರಂತೆ ಆಕಾಶ ಬಾರಿಗಿಡದ ಅವರ ವಿರುದ್ಧ ಸಹ ನೀವು ಚೆಕ ಬೌನ್ಸ ಪ್ರಕರಣ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ಸದರಿ ಪ್ರಕರಣ 40 ಸಾವಿರಗೆ ಸಲ್ಲಿಸಿದ್ದು, ಅದು ರಾಜೀ ಆಯಿತು ಎಂದರೆ ಸರಿಯಲ್ಲ.

2. ನೀವು ನಿಮ್ಮ ಊರಿನಲ್ಲಿ ಹಿರಿತನ ಮಾಡುತ್ತೀರಿ ಎಂದರೆ ಸರಿಯಲ್ಲ. ನೀವು ಜನರ ಮೇಲೆ ದಬ್ಬಾಳಿಕೆ ಮಾಡಿ ಸುಳ್ಳು ಪ್ರಕರಣವನ್ನು ಸಲ್ಲಿಸುತ್ತೀರಿ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ನಿಪಿ-1 ಚೆಕ್ಕನ್ನು ತೋರಿಸುತ್ತಿದ್ದು, ಅದನ್ನು ಯಾರು ಬರೆದಿದ್ದಾರೆ ಎಂದರೆ ಆರೋಪಿತ ಬರೆದಿದ್ದಾನೆ ಎಂದು ಹೇಳುತ್ತಾರೆ. ಆ ರೀತಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಚೆಕ ಮೇಲಿನ ಸಹಿ ಮತ್ತು ಉಳಿದ ಬರವಣಿಗೆ ಬೇರೆ ಬೇರೆ ಶಾಹಿ ಮತ್ತು ಬೇರೆ ಬೇರೆ ವ್ಯಕ್ತಿಗಳಿಂದ ಬರೆದ ಅಕ್ಷರಗಳಿಂದ ಕೂಡಿದೆ ಎಂದರೆ ಸಾಕ್ಷಿಯು ಆರೋಪಿತ ನನಗೆ ಚೆಕ ನೀಡಿದ್ದು, ನಾನು ಅನಕ್ಷರಸ್ಥನಾದ ಕಾರಣ ಆತ ನೀಡಿದ ಚೆಕನ್ನು ನಗದೀಕರಣಕ್ಕೆ ಹಾಜರಪಡಿಸಿದ್ದೇನೆ ಎಂದು ಹೇಳುತ್ತಾರೆ. ನೀವು ಪಲ್ಸ ಕಂಪನಿಯಲ್ಲಿ ವಿಮೆ ಮಾಡಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಶಿವಪ್ಪ ಕುಲಗೋಡ ಮತ್ತು ಲಕ್ಷ್ಮಣ ಕುಲಗೋಡ ಇವರು ವಿಮಾ ಏಜೆಂಟ್ ಇದ್ದಾರೆ ಎಂದರೆ ನನಗೆ ಅವರ ಪರಿಚಯ ಇಲ್ಲ ಎಂದು ಹೇಳುತ್ತಾರೆ. ಸದರಿ ಇಬ್ಬರು ವ್ಯಕ್ತಿಗಳು ನಿಮ್ಮ ಜಾತಿಯವರು ಇದ್ದು, ನಿಮ್ಮ ಸಂಬಂಧಿಕರಿದ್ದರು ಸಹ ಪರಿಚಯ ಇಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಸದರಿ ವ್ಯಕ್ತಿಗಳು ಪಲ್ಸ ಕಂಪನಿಯ ಏಜೆಂಟಗಳು ಇದ್ದು, ಅದು ಮುಚ್ಚಿದ ಕಾರಣ ನಿಮ್ಮ ಕಡೆಯಿಂದ ಈ ಸುಳ್ಳು ಪ್ರಕರಣ ದಾಖಲಿಸುವಂತೆ ಮಾಡಿದ್ದಾರೆ ಎಂದರೆ ಸರಿಯಲ್ಲ.

3. ಮೂರು ಲಕ್ಷ ರೂಪಾಯಿಯಷ್ಟು ಮೊತ್ತ ದೊಡ್ಡ ಮೊತ್ತ ಇದ್ದು, ನಿಮ್ಮ ಖಾತೆಯಲ್ಲಾಗಲೀ ಅಥವಾ ನಿಮ್ಮ ಬಳಿಯಾಗಲೀ ಅಷ್ಟು ದೊಡ್ಡ ಮೊತ್ತ ಇಲ್ಲ, ನಿಮಗೆ ಆರ್ಥಿಕ ಸಾಮರ್ಥ್ಯ ಇಲ್ಲ ಎಂದರೆ, ಆರ್ಥಿಕ ಸಾಮರ್ಥ್ಯ ಇದೆ ಎಂದು ಸಾಕ್ಷಿ ಹೇಳುತ್ತಾರೆ. ನೀವು ಹಾಜರಪಡಿಸಿದ ಉತಾರೆಗಳಲ್ಲಿ ಕೇವಲ ಮೆಕ್ಕೆ ಜೋಳ ಮಾತ್ರ ಇದೆ ಎಂದರೆ ನಾವು ಕಬ್ಬು, ಬಾಳೆ ಮತ್ತು ಗೋವಿನಜೋಳ ಬೆಳೆಯುತ್ತೇವೆ, ಉತಾರೆಯಲ್ಲಿ ಏನು ಬರೆದಿದ್ದಾರೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನೀವು ಒಟ್ಟು 8 ಲಕ್ಷ 50 ಸಾವಿರ ಸಾಲವನ್ನು ನಿಪಿ-7 ರಂತೆ ಪಡೆದಿದ್ದು, ನಿಮ್ಮ ಪ್ರಕಾರ ಅದನ್ನು ಮರುಪಾವತಿ ಮಾಡಿದ ಬಗ್ಗೆ ಯಾವುದಾದರೂ ದಾಖಲಾತಿ ಹಾಜರಪಡಿಸಿದ್ದೀರಾ ಎಂದರೆ ಸಾಕ್ಷಿಯು ಕೇವಲ ಬೆಳೆ ಸಾಲ ಹೊರತುಪಡಿಸಿ, ಉಳಿದ ದಾಖಲಾತಿ ಹಾಜರಪಡಿಸಿಲ್ಲ, ಹಾಜರಪಡಿಸುತ್ತೇನೆ ಎಂದು ಹೇಳುತ್ತಾರೆ. ನೀವು ಸ್ವತಃ ಸಾಲಗಾರರಾಗಿದ್ದು, 3 ಲಕ್ಷ ರೂಪಾಯಿಯಷ್ಟು ಮೊತ್ತ ಕೊಡುವ ಆರ್ಥಿಕ ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ. ನೀವು ಮತ್ತು ಕುಲಗೋಡ ಅವರು ಶಾಮೀಲಾಗಿ ಆರೋಪಿತನಿಂದ ಹೇಗಾದರೂ ಹಣ ವಸೂಲಿ ಮಾಡುವ

ಉದ್ದೇಶದಿಂದ ಸುಳ್ಳು ಪ್ರಕರಣ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿತ ಪಲ್ಸ ಏಜೆಂಟ್ ಆದ ಕಾರಣ ಲಕ್ಷ್ಮಣ ಕುಲಗೋಡ ಅವರಿಗೆ ನೀಡಿದ ಚೆಕ್ಕನ್ನು ದುರುಪಯೋಪಡಿಸಿ ತಮ್ಮಿಂದ ಯಾವುದೇ ಹಣ ಆತ ಪಡೆಯದೇ ಇದ್ದರೂ ಸಹ ಆತನಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಪ್ರಕರಣ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಅದೆ.

ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ